ಹಸಿವಾಗಿರದಿದ್ದರೂ ಅವಳಿಗೆ ಹಸಿವಾಗಿತ್ತು. ಮಧ್ಯಾಹ್ನದ ಊಟಕ್ಕೆ ಮನೆಯಿಂದ ಕಟ್ಟಿಕೊಂಡು ಹೋಗಿ ಅವಸರದಿಂದ ತಿಂದಿದ್ದ ಎರಡು ಚಪಾತಿ ಯಾವಾಗಲೋ ಭಸ್ಮವಾಗಿತ್ತು. ಎಲ್ಲಾ ನಿರ್ಧಾರವಾದ ನೆಮ್ಮದಿಯಲ್ಲಿ ಸುವರ್ಣ ಹೇಳಿದರು,

"ನಡೀರಿ, ನಡೀರಿ. ಆಗ್ಲೇ ಎಂಟೂವರೆ. ಊಟಕ್ಕೆ ತಡ ಆಗಿ ಹೋಯ್ತು."

★★★

ಮಂಚದ ಮೇಲೆ ಮಲಗಿ ಕೈಲೊಂದು ವಾರಪತ್ರಿಕೆ ಹಿಡಿದುಕೊಂಡಳು ಕಸ್ತೂರಿ. ನಿದ್ದೆಗೆ ಮುನ್ನ ಒಂದರ್ಧ ಗಂಟೆ ಏನಾದರೂ ಓದುವುದು ಅವಳ ಅಭ್ಯಾಸ. ಹವ್ಯಾಸ. ಮದುವೆಯಾಗಿ ಅವಳು ಈ ಮನೆಗೆ ಕಾಲಿಟ್ಟ ಮೇಲೆ ಮನೆಗೆ ವಾರಪತ್ರಿಕೆಗಳು, ಮಾಸಪತ್ರಿಕೆಗಳು ಬರತೊಡಗಿವೆ. ಕುತೂಹಲಕ್ಕಾದರೂ ವಾರಗಿತ್ತಿ ಪುಸ್ತಕ ತಿರುವಿ ಹಾಕುವುದಿಲ್ಲ. ಅತ್ತೆಯಂತೂ ಸರಿಯೇ ಸರಿ. ಹೊಸ ಪುಸ್ತಕದ ಘಮಲು ಅಂದರೆ ಅಮಲೇರಿದಂತಾಗುವ ಕಸ್ತೂರಿಗೂ, ಈ ಮನೆಯ ಉಳಿದ ಸದಸ್ಯರಿಗೂ ಸ್ವಭಾವದಲ್ಲಿ ಅಜಗಜಾಂತರ. ರಾತ್ರಿಯೂಟದ ನಂತರ ಹಿರಿ ಸೊಸೆ, ಅತ್ತೆ ಟೀವಿ ಧಾರಾವಾಹಿಗಳನ್ನು ನೋಡುವುದರಲ್ಲಿ ಮುಳುಗಿ ಹೋದರೆ ಕಸ್ತೂರಿ ಕೈಲೊಂದು ಪುಸ್ತಕ ಹಿಡಿದು ರೂಮು ಸೇರಿಕೊಳ್ಳುತ್ತಾಳೆ. ಇವತ್ತು ಕೈಲಿ ಪುಸ್ತಕ ಇದ್ದರೂ ಕಸ್ತೂರಿಯ ಗಮನ ರಾಜೀವನ ಮೇಲಿದೆ. ಅನಿವಾರ್ಯವಾಗಿ ಅವನು ಮರುದಿನದ ಪ್ರಯಾಣಕ್ಕೆ ಸಿದ್ಧತೆ ನಡೆಸುತ್ತಿದ್ದಾನೆ. ಅನಿವಾರ್ಯವಾಗಿಯೋ ಅಥವಾ ಅದೊಂದು ತೋರಿಕೆಯೋ? ಬಂಧುಬಳಗ ಒಗ್ಗೂಡುವಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಲು ಅವನಿಗೂ ಇರಬಹುದಲ್ಲವೇ ಚಪಲ? ಇಂತಾ ಸಂದರ್ಭಗಳಿಂದ ತನ್ನನ್ನು ದೂರವಿಡಲು ಅತ್ತೆ ಏನೆಲ್ಲಾ ತಂತ್ರಗಾರಿಕೆ ಪ್ರಯೋಗಿಸುತ್ತಾರೆ ಎಂದು ನೆನೆದರೆ ಅವಳಿಗೆ ವಿಷಾದವಾಗುತ್ತದೆ. ಮೂರ್ನಾಲ್ಕು ಸಲ ಇಂತಾ ಪ್ರಸಂಗಗಳನ್ನು ಎದುರಿಸಿದ ಮೇಲೆ ಕಸ್ತೂರಿಗೆ ಮನವರಿಕೆಯಾಗಿಬಿಟ್ಟಿತ್ತು, ತನ್ನನ್ನು ಜೊತೆಗೆ ಕರೆದುಕೊಂಡು ಹೋಗಲು ಅತ್ತೆಗೆ ಮನಸ್ಸಿಲ್ಲ. ಮೇಲೆ ಬಿದ್ದು ಅವರ ಜೊತೆ ಹೊರಡಲು ಅವಳಿಗೂ ಇಷ್ಟವಿಲ್ಲ. ವಾಸ್ತವ ಅಂದರೆ ನೂರಾರು ಜನ ಸೇರುವಂತಾ ಸಮಾರಂಭಗಳಿಂದ ಅವಳು ಯಾವತ್ತೂ ದೂರ, ಮದುವೆಗೆ ಮೊದಲೂ ಮತ್ತು ನಂತರವೂ.

ಮದುವೆಯಾದ ಹೊಸದರಲ್ಲಿ ಹೀಗೊಂದು ಕೌಟುಂಬಿಕ ಕಾರ್ಯಕ್ರಮದಲ್ಲಿ ಹಾಜರಿ ಹಾಕಬೇಕಾದ ಪ್ರಸಂಗ ಬಂದಾಗ ಅತ್ತೆ ಹೇಳಿದ್ದರು,

"ಕಾರ್ತೀಕ ಮಾಸ ಅಲ್ವಾ? ದೇವರ ಎದುರು, ತುಳಸಿ ಎದುರು ಒಂದು ದೀಪ ಹಚ್ಚಿಡೋಕಾದ್ರೂ ಮನೇಲಿ ಯಾರಾದ್ರೂ ಇರ್ಬೇಕಾಗುತ್ತೆ..."

ಚಂಪಕಾ ವಾರಗಟ್ಟಲೆ ಮೊದಲಿನಿಂದ ಇಂತಾ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಂಡಿರುತ್ತಾಳೆ. ಐರನ್ ಮಾಡಿಸಬೇಕಾದ ಸೀರೆ, ಕುಪ್ಪಸಗಳಿಗೆ ಐರನ್ ಮಾಡಿಸಿ, ಹೊಸತು ಹೊಲಿಸಬೇಕಾದರೆ ಹೊಲಿಸಿ, ಪಾರ್ಲರಿಗೆ ಎಡತಾಕಿ ಮುಖ ತೀಡಿಸಿಕೊಂಡು, ಹುಬ್ಬು ತಿದ್ದಿಸಿಕೊಂಡು, ವರ್ಷ ಅರವತ್ತು ದಾಟಿದ್ದರೂ ಸುವರ್ಣ ಇಂತಾ ವಿಷಯಗಳಲ್ಲಿ ಹಿಂದೆ ಬೀಳುವುದಿಲ್ಲ. ಅಚ್ಚುಕಟ್ಟಾಗಿ ತಲೆಗೂದಲನ್ನು ಟ್ರಿಮ್ ಮಾಡಿಸಿಕೊಂಡು, ಡೈ ಮಾಡಿಸಿಕೊಳ್ಳುತ್ತಾರೆ. ಆಗಿದ್ದಕ್ಕಿಂತಾ ಹತ್ತು ವರ್ಷ ಚಿಕ್ಕವರಾಗಿ ಕಾಣಿಸುತ್ತಾರೆ. ಯಾರಾದರೂ ಈ ಕುರಿತಾಗಿ ಮೆಚ್ಚುಗೆ ಸೂಚಿಸಿದರೆ ಮೊರದಗಲವಾಗುತ್ತದೆ ಮುಖ. ಕಾರ್ತೀಕಮಾಸದ ದೀಪ ಇಡುವುದರ ಕುರಿತು ಅತ್ತೆಯ ಚಡಪಡಿಕೆ ಕಂಡು ಸಹಜವಾಗಿ ಹೇಳಿದ್ದಳು ಕಸ್ತೂರಿ,

"ನೀವೆಲ್ಲಾ ಹೋಗ್ಬನ್ನಿ. ನಾನು ಮನೇಲಿರ್ತೀನಿ. ಸುಮ್ನೆ ಯಾಕೆ ರಜಾ ವೇಸ್ಟ್ ಮಾಡೋದು?"

ಅಮ್ಮನ ಒತ್ತಾಯಕ್ಕೆ ಬಗ್ಗದೆ ರಾಜೀವ ಮನೆಯಲ್ಲಿ ಉಳಿದುಕೊಂಡಿದ್ದು ಕಸ್ತೂರಿಗೆ ಅದೆಷ್ಟು